ಎಂದರು ಮ್ಯಾನೇಜರ್.

ಕೇಸು ಕೋರ್ಟಿನಲ್ಲಿದೆ. ಇನ್ನೂ ಒಳಜಾತಿ ತೀರ್ಮಾನವಾಗಿಲ್ಲ.

ಹಾಗಾದರೆ ಸಾಲ ಕೊಡಲು ಆಗುವುದಿಲ್ಲ.

ಏಕೆ?

ಜಾತಿ ಆಧಾರದ ಮೇಲೆ ನಿಮಗೆ ಕೊಡಬೇಕಾದುದು ಮನ್ನಾ ಆಗುವ ಸಾಲವೋ, ವಸೂಲಿಗಾಗಿ ಸೋತು ಸುಣ್ಣ ಆಗುವ ಸಾಲವೋ ಎಂದು ತೀರ್ಮಾನಿಸಿ ಕೊಡಬೇಕಲ್ಲ, ಜಾತಿ ಗೊತ್ತಾಗದಿದ್ದರೆ ಸಾಲದ ಕೆಟಗರಿ ಗೊತ್ತಾಗಲ್ಲ.

ಜನರಲ್ ಕೆಟಗರಿಯಲ್ಲೇ ಕೊಡಿ.

ಸರಿ. ಆದರೆ ನಕಲು ವ್ಯವಹಾರಗಳ ಬದಲಿಗೆ ಅಸಲಿ ವ್ಯವಹಾರ ಯಾವುದಾದರೂ ನಡೆಸಿ.

ಮಡದಿಯ ಕಣ್ಸನ್ನೆ ನನ್ನನ್ನು ಹೊರಗಟ್ಟಿತು. ಹಿಂದೆಯೇ ಬಂದ ಮನದನ್ನೆ 'ರ್‍ರೀ... ಚಿಲ್ರೆ ಸಾಲ ಕೇಳಿ ನಮ್ಮಪ್ಪನ ಮಾನ ಕಳೀಬೇಡಿ. ದೊಡ್ಡದಾದ ಸಾಲ ಕೇಳಿ' ಎಂದಳು.

ಸಾಲ ಕಡಿಮೆ ಇದ್ದರೆ ಮಾನ ಜಾಸ್ತಿ ಅಲ್ವೇನೇ?

ಪೂರ್ ಫೆಲೋ! ಫಿಂಗ್ ಕಿಸರ್ ಪಲ್ಯರನ್ನ ನೋಡಿಯೂ ಕಲಿತಿಲ್ವಲ್ಲಾ ನೀವು! ದೊಡ್ಡ ಸಾಲ ಮಾಡಿದರೆ ಬ್ರಿಟನ್ ಕರೆದು ಮನೆ ಕೊಡತ್ತಂತೆ. ಕೊಡೋ ಬ್ಯಾಂಕು ದೊಡ್ಡದಾಗಿರೋವಾಗ ನಾವ್ಯಾಕೆ ಚಿಕ್ಸಾಲ ಕೇಳಿ ಚಿಕ್ಕವ್ರಾಗ್ಬೇಕು?

ಓಕೆ. ಪ್ರಾಜೆಕ್ಟು?

ನಾನು ಮಾತಾಡ್ತೀನಿ. ನೀವು ಮನೇಲಿರೋವಾಗ ಹೇಗಿರ್ತೀರೋ ಹಾಗಿರಿ– ಎಂದಳು. ಹಾಗೆಂದರೆ ತೆಪ್ಪಗಿರಿ ಎಂದರ್ಥ!

ಮತ್ತೆ ಕ್ಯಾಬಿನ್ ಸೇರಿದೆವು. ಹೆಂಡತಿ ತನ್ನ ಪರ್ಸಿನಿಂದ ಒಂದು ಪೌಚ್ ತೆಗೆದು ಮ್ಯಾನೇಜರ್‌ಗೆ ತೋರಿಸುತ್ತಾ ಈ ತರಹದ ಪೌಚ್ ಮ್ಯಾನುಫ್ಯಾಕ್ಚರ್ ಮಾಡ್ತೀವಿ ಸರ್ ಎಂದಳು.

ಮ್ಯಾನೇಜರ್ ಅದನ್ನು ಕೈಗೆತ್ತಿಕೊಂಡು ಅತ್ತಿತ್ತ ತಿರುಗಿಸಿ ನೋಡುತ್ತಾ 'ಹಿಂಭಾಗವೇ ಇಲ್ಲದ ಪೌಚ್‌ನಿಂದ ಏನುಪಯೋಗ?' ಎಂದರು.

ಹಿಂದ್ಗಡೆ ಹೆಲ್ಮೆಟ್ ಇರತ್ತಲ್ಲ ಸಾರ್.

ಅಂದರೆ?

ಬೈಕ್ ಸವಾರರು ರೈಡ್ ಮಾಡುವಾಗ ಮೊಬೈಲ್ ಕೈಲಿ ಹಿಡಿದು ಮಾತನಾಡಿದರೆ ಡೇಂಜರ್ ಸರ್.

ಅದಕ್ಕೂ ಇದಕ್ಕೂ ಏನು ಸಂಬಂಧ?

ಈ ಪೌಚನ್ನು ಹೆಲ್ಮೆಟ್ ಗಲ್ಲವನ್ನು ಮುಟ್ಟುವ ಸ್ಥಳದಲ್ಲಿ ಸಿಕ್ಕಿಸಿ ಹೊಲೆದುಬಿಟ್ಟರೆ ಮೊಬೈಲ್ ಇದರಲ್ಲಿ ಕುಳಿತುಕೊಳ್ಳುತ್ತದೆ. ಝುಂಂಂಂಯ್ ಎಂದು ಸವಾರಿ ಮಾಡುತ್ತಲೇ ಮಾತನಾಡಲು ಇದು ಅನುಕೂಲಕರ – ವಿವರಿಸಿದಳು ಮಡದಿ.

ಮ್ಯಾನೇಜರ್ ಕೂಡಲೆ ನಮ್ಮಿಬ್ಬರಿಗೂ ಕಾಫಿ ಆರ್ಡರಿಸಿ ತನ್ನ ಟೀನೇಜ್ ಡಾಟರ್‌ಗೆ ಫೋನಾಯಿಸಿ ಮಡದಿ ಹೇಳಿದ ಪ್ರಾಜೆಕ್ಟ್ ವಿವರಿಸಿದರು. 'ವಾವ್! ಪಪ್ಪಾ! ವಾಟ್ ಎ ಪ್ರಾಜೆಕ್ಟ್' ಎಂದಳು ಟೀನೇಜಿಣಿ. ಕೂಡಲೆ ಮ್ಯಾನೇಜರ್ ನಮ್ಮತ್ತ ತಿರುಗಿ 'ಯುವರ್ ಪ್ರಾಜೆಕ್ಟ್ ಈಸ್ ಅಪ್ರೂವ್ಡ್' ಎಂದರು.

ಆದರೆ ಎಕ್ಸ್‌ಪರ್ಟ್‌ಗಳ ಒಪೀನಿಯನ್ ಬೇಡವೇನು?– ನನ್ನದು ಪರ್ಮನೆಂಟ್ ಸಂದೇಹ ಪ್ರವೃತ್ತಿ

'ಡೋಂಟ್ ಬಿ ಎ ಫೂಲ್' ಮಡದಿ ಪಿಸುಮಾತಿನಲ್ಲೇ ಗದರಿದಳು. 'ಹಿರಿಯ ಪಕ್ಷಗಳನ್ನೇ ನಡೆಸಲೆಂದು ಮಕ್ಕಳ ಕೈಗೆ ಕೊಡುವಾಗ ಒಂದು ಸ್ಮಾಲ್ ಪ್ರಾಜೆಕ್ಟ್‌ಗೆ ಎಕ್ಸ್‌ಪರ್ಟ್ ಒಪೀನಿಯನ್ ಬೇಕಾ? ಓಲ್ಡ್ ಫ್ಯಾಷನ್ಡ್ ಫೆಲೋ.'

ತಲೆಯೆತ್ತಿ ನೋಡಿದೆ. ಮ್ಯಾನೇಜರ್ ನನ್ನ ಮಡದಿಯತ್ತ ಹೆಮ್ಮೆಯಿಂದ, ನನ್ನತ್ತ ಅನುಕಂಪದಿಂದ ನೋಡುತ್ತಾ 'ಫೈನ್. ಎಲ್ಲಿ ಶುರು ಮಾಡ್ಬೇಕೂಂತಿದೀರಿ ನಿಮ್ಮ ಕಂಪನಿಯನ್ನ?' ಎಂದರು.

ಕರ್ನಾಟಕದಲ್ಲಿ.

'ಓಹ್! ಐ ಆಮ್ ಸೋ ಸಾರಿ. ಹೆಲ್ಮೆಟ್‌ಗೆ ಈ ಪೌಚ್ ಹೊಲೆಯಬೇಕಾದರೆ ಹಳೆಯ ಕಾಲದ ಹೊಲಿಗೆ ಮಿಷನ್ ಸಾಲಲ್ಲ. ಅದಕ್ಕೆಲ್ಲ ಎಲೆಕ್ಟ್ರಿಕಲಿ ಆಪರೇಟೆಡ್ ಸ್ಟ್ಯೂಯಿಂಗ್ ಮಿಷನ್‌ಗಳು ಬೇಕು. ಕರ್ನಾಟಕದಲ್ಲಿ ಕರೆಂಟ್ ಇರಲ್ಲ. ಆದ್ದರಿಂದ ಪ್ರಾಜೆಕ್ಟ್ ಲೋನ್ ಕ್ಯಾನ್ಸಲ್ಡ್' ಎನ್ನುತ್ತಾ ಮೇಲೆದ್ದರು ಮ್ಯಾನೇಜರ್.

ಮಡದಿ ಅಂದೆಂದೋ ನನ್ನನ್ನು ವಶೀಕರಿಸಿಕೊಳ್ಳಲು ಬೀರಿದ ನಗೆ ಬೀರಿದಳು. ಮ್ಯಾನೇಜರಾದರೇನು, ಗಂಡೇ ಅಲ್ಲವೆ! ಸುಂದರ ಹೆಣ್ಣು ಸುಂದರವಾಗಿ ನಕ್ಕಾಗ ನನ್ನಂತೆಯೇ ಅವನೂ ಪುಂಗಿಯ ಮುಂದಿನ ಹಾವು!

'ಸರ್, ನಮ್ಮ ಪ್ರಾಜೆಕ್ಟ್‌ನ ಪವರ್ ಮಿನಿಸ್ಟರ್ ಕಾನ್ಸ್‌ಟಿಟ್ಯುಯೆನ್ಸಿಯಲ್ಲೇ ಎಸ್ಟಾಬ್ಲಿಷ್ ಮಾಡ್ತೀವಿ ಸಾರ್. ಪವರ್ ಮಿನಿಸ್ಟರ್ ಏರಿಯಾದಲ್ಲಿ ಪವರ್ ಕಟ್ ಮಾಡೋ ಗಂಡು ಇನ್ನೂ ಹುಟ್ಟಿಲ್ಲ ಸಾರ್ ' ಎಂದೆ.

ಮ್ಯಾನೇಜರ್ ಮತ್ತೆ ಸೀಟಿಗಂಟಿದರು.

ಪ್ರಾಜೆಕ್ಟ್ ಖರ್ಚು ಎಷ್ಟಾಗತ್ತೆ?

'ಐನೂರು ಕೋಟಿ. ನಮ್ಮದು ನೂರು ಕೋಟಿ ಇನ್‌ವೆಸ್ಟ್‌ಮೆಂಟ್. ನಾನೂರು ಕೋಟಿ ಸಾಲ ಕೊಟ್ಟರೆ ಸಾಕು' ಎಂದಳು.

'ಸರಿ. ಇಂದಿನವರೆಗಿನ ನಿಮ್ಮ ಬ್ಯಾಂಕ್ ಬ್ಯಾಲೆನ್ಸ್ ಷೀಟ್ ಕೊಡಿ.'

ಇಬ್ಬರದೂ ಬ್ಯಾಲೆನ್ಸ್ ಷೀಟ್ ನೀಡಿದೆವು. ಹೇಳ್ಕೊಳುವಂತಹ ಟ್ರಾನ್ಸಾಕ್ಷನ್ ಏನಿಲ್ಲ. ಆದರೆ ಚೆಕ್ ಬೌನ್ಸ್ ಆಗಿಲ್ಲ, ಮಿನಿಮಮ್ ಬ್ಯಾಲೆನ್ಸ್ ಮೇಯ್ನ್‌ಟೇಯ್ನ್ ಮಾಡಿದ್ದೀರ. ನೋಡೋಣ. ನಿಮ್ಮ ಆಧಾರ್ ಕಾರ್ಡ್ ಕೊಡಿ.

ಕೊಟ್ಟೆವು. ಆಧಾರ್ ಕಾರ್ಡಿನಲ್ಲಿ ನನ್ನ ಮುಖ ಕಪ್ಪನೆಯ ಮಡಕೆಯಂತೆ ಕಾಣುತ್ತಿತ್ತಷ್ಟೆ. ಆದರೂ ಯೂ ಲುಕ್ ಬೆಟರ್ ಇನ್ ಆಧಾರ್ ಕಾರ್ಡ್ ಎಂದ ಮ್ಯಾನೇಜರ್ ಹೆಂಡತಿಯ ಆಧಾರ್ ಕಾರ್ಡ್ ನೋಡುತ್ತಾ 'ಮೋಸ. ನಿಮ್ಮಂತಹ ಮಹಿಳೆಯ ಫೋಟೋ ಈ ತರಹ ತೆಗೆದವನನ್ನು ಸಸ್ಪೆಂಡ್ ಮಾಡಬೇಕು' ಎಂದರು.

ಓಹ್ ನೋ, ಮಿಸ್ಟರ್ ಮ್ಯಾನೇಜರ್, ಯಾರೂ ತಮ್ಮ ಆಧಾರ್ ಕಾರ್ಡ್‌ನಷ್ಟು ಕೆಟ್ಟದಾಗಿ ಇರಲ್ಲ, ಯಾರೂ ತಮ್ಮ ಫೇಸ್‌ಬುಕ್ ಪ್ರೊಫೈಲ್ ಫೋಟೋದಷ್ಟು ಬ್ಯೂಟಿಫುಲ್ಲಾಗೂ ಇರಲ್ಲ ಎಂದುಲಿದಳು ಮಡದಿ.

ನಂತರ ನಮ್ಮ ರೆಸಿಡೆನ್ಸ್ ಪ್ರೂಫ್, ಪ್ಯಾನ್ ಕಾರ್ಡ್, ನಮ್ಮ ಅಂದಿನವರೆಗಿನ ವಿವಿಧ ಚಟುವಟಿಕೆಗಳ ಸರ್ಟಿಫಿಕೇಟ್‌ಗಳು, ಇತ್ಯಾದಿಗಳನ್ನು ಪಡೆದ ಮ್ಯಾನೇಜರ್ ಎಲ್ಲವನ್ನೂ ಪರಿಶೀಲಿಸಿ 'ಫೈನ್. ಟಾಕಪ್ ಇಂಡಿಯಾ ಸ್ಕೀಮಿನಲ್ಲಿ ಇದಕ್ಕೆ ಲೋನ್ ಸ್ಯಾಂಕ್ಷನ್ ಮಾಡಿಸುತ್ತೇನೆ. ಜೊತೆಜೊತೆಗೇ ಮಾತನಾಡೀ, ಆಡೀ, ಬೆವರಿದವರಿಗೆ ಮೇಕಪ್ ಇಂಡಿಯಾ ಸ್ಕೀಮಿನಲ್ಲಿ ಲಿಪ್, ತ್ರೋಟ್ & ಟಂಗ್ ಫ್ರೆಷನರ್ ತಯಾರಿಸುವ ಯೋಜನೆಯನ್ನೂ ನೀವು ಪ್ರೊಪೋಸ್ ಮಾಡಿ ಮೇಡಂ' ಎಂದರು.

ಪ್ರಾಜೆಕ್ಟ್ ಪ್ರೊಪೋಸಲ್ ಸಲ್ಲಿಸಲಾಯಿತು. ಷೂರಿಟಿಗಳು ಆಗಮಿಸಿದರು. ಕೊಲ್ಯಾಟರಲ್ ನೀಡಲಾಯಿತು.

'ಈವತ್ತು ಫ್ರೈಡೇ. ಸೋಮವಾರ ನಿಮ್ಮ ಅಕೌಂಟ್‌ಗೆ ಫಂಡ್ ಟ್ರಾನ್ಸ್‌ಫರ್ ಮಾಡ್ತೀವಿ. ಅಂದ ಹಾಗೇ... ನಿಮ್ಮ ರೆಸಿಡೆನ್ಸ್ ಪ್ರೂಫ್ ಅಂತ ಕೊಟ್ಟಿದ್ದ ಡ್ರೈವಿಂಗ್ ಲೈಸೆನ್ಸ್ ಎಕ್ಸ್‌ಪೈರ್ ಆಗಿದೆ. ಬೇರೆ ಏನಾದ್ರೂ ಪ್ರೂಫ್ ಕೊಡ್ತೀರಾ?' ಎಂದರು ಮ್ಯಾನೇಜರ್.

ನಾನು ಫೈಲಿನಿಂದ ಪಾಸ್‌ಪೋರ್ಟ್ ತೆಗೆದು ನೀಡಿದೆ.

ಮ್ಯಾನೇಜರ್ ಅದನ್ನು ನೋಡುತ್ತಿದ್ದಂತೆಯೇ ಏಜ್ ಆದ ಮ್ಯಾನ್‌ನಂತೆ ಕಾಣತೊಡಗಿದರು. 'ಪಾ...ಪ್ಯಾ... ಪ್ಯಾಸ್‌ಪೋರ್ಟಾ?' ಎಂದರು. ಅಹುದೆಂದೆ.

ಪಾಸ್‌ಪೋರ್ಟ್ ತೆಗೆದುಕೊಂಡು ಹಾಳೆಗಳನ್ನು ತಿರುವುತ್ತಾ 'ಅಯ್ಯೋ... ವೀಸಾನೂ ಇದೆಯಾ? ನಿಮ್ಮ ಹೆಂಡತಿಗೆ?' ಎಂದು ಬೆವರುತ್ತಲೇ ಕೇಳಿದರು.

'ಅವಳಿಗೂ ಇದೆ..'

'ಸೋ ಸಾರಿ ಲೇಡಿ ಅಂಡ್ ಜಂಟಲ್‌ಮನ್. ಲೋನ್ ಕ್ಯಾನ್ಸಲ್ಡ್' ಎಂದು ಕುಸಿದು ಕುಳಿತರು ಮ್ಯಾನೇಜರ್.

'ಯಾಕೆ ಸಾರ್?' ಇಬ್ಬರೂ ಒಟ್ಟಿಗೇ ಕೂಗಿದೆವು.

'ಸಾಲ ವಸೂಲೀಗೇಂತ ನಾವು ಮನೆಮನೆ ಅಲೆಯಬಹುದು. ಆದರೆ ದೇಶ ದೇಶ ಅಲೆಯುವಂತಹ ರಿಸ್ಕ್ ತೊಗೊಳಕ್ಕಾಗಲ್ಲ. ವೆರಿ ಸಾರಿ' ಎನ್ನುತ್ತಾ ಎಕ್ಸಿಟ್ ಕಡೆ ಬೆರಳು ತೋರಿಸಿದರು.

ನೀರವ ಮೌನದಿಂದ ಇಬ್ಬರೂ ಬ್ಯಾಂಕ್‌ನಿಂದ ಹೊರನಡೆದೆವು!